ಶ್ರೀಮತಿ ಮನೋರಮಾ ಮಧ್ವರಾಜ್.—ಈ ವಿಳಂಬಕ್ಕೆ ಕಾರಣವೇನು ಎಂದು ತಿಳಿಸುತ್ತೀರಾ ?

ಶ್ರೀ ಬಿ. ಸೋಮಶೇಖರ್.—ಹಣ ಬಿಡುಗಡೆಯಾಗದೇ ಇದ್ದುದರಿಂದ ಸ್ವಲ್ಪ ವಿಳಂಬವಾಗಿದೆ. ಫೆಬ್ರುವರಿ ಕೊನೆಯವರೆಗೆ ಎಲ್ಲರಿಗೂ ವೇತನವನ್ನು ವಿತರಣೆ ಮಾಡಿದ್ದಾರೆ. ಈಗ ಏನೂ ತೊಂದರೆ ಇಲ್ಲ.

ಶಿಕ್ಷಕರು ಮತ್ತು ಇತರೇ ಹುದ್ದೆಗಳ ನೇಮಕಾತಿ

೧೦೫೮. ಶ್ರೀ ಮಹಮ್ಮದ್ ಲೈಕುದ್ದೀನ್ (ಬೀದರ್).—ಪ್ರಾಥಮಿಕ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಖಾಸಗಿ ಆಡಳಿತ ಮಂಡಳಿಗಳಿಂದ ನಡೆಸಲ್ಪಡುವ ಶಿಕ್ಷಣ ಸಂಸ್ಥೆಗಳ ಶಿಕ್ಷಕರು ಮತ್ತು ಇತರೇ ಹುದ್ದೆಗಳ ನೇಮಕಾತಿಗೆ ನೇಮಕಾತಿ ಸಮಿತಿ ರಚಿಸಿ ಸರ್ಕಾರ ಆಕ್ಟೋಬರ್ ೧೯೮೭ ರಲ್ಲಿ ಆಜ್ಞೆ ಹೊರಡಿಸಿರುವುದು ನಿಜವಲ್ಲವೇ ?

ಆ) ಹಾಗಿದ್ದಲ್ಲಿ ಅನುದಾನ ಸಂಹಿತೆಯಲ್ಲಿ ಆಡಳಿತ ಮಂಡಳಿಗೆ ಕೊಡಲಾದ ನೇಮಕಾತಿ ಅಧಿಕಾರವನ್ನು ಹಿಂದಕ್ಕೆ ಪಡೆದಂತೆ ಆಗುವುದಿಲ್ಲವೇ ?

ಇ) ಭಾರತ ಸಂವಿಧಾನದ ಅಡಿಯಲ್ಲಿ ಕೊಡಲಾದ ಸೌಲಭ್ಯವನ್ನು ಇಂತಹ ಸರ್ಕಾರಿ ಆದೇಶವು ಮೊಟಕುಗೊಳಿಸಿದಂತೆ ಆಗುವುದಿಲ್ಲವೇ ?

ಈ) ಹಾಗಿದ್ದಲ್ಲಿ ಇಂತಹ ಆದೇಶವನ್ನು ಸರ್ಕಾರ ಹಿಂತೆಗೆದುಕೊಳ್ಳುವುದೇ ?

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಮತ್ತು ಸೆಕಂಡರಿ ಶಿಕ್ಷಣದ ಸಚಿವರು).—

ಅ) ಹೌದು.

ಆ) ಇಲ್ಲ.

ಇ) ಇಲ್ಲ.

ಈ) ಇಲ್ಲ.

SRI MOHAMMED LAIQUDDIN.—Sir, formerly the private Managements had the rights to establish, run and administer private educational institutions particularly the minority institutions. Right to administer means right to appoint teachers as well as other staff members. By the issue of this Government order reconstituting the Selection Committees, there are nominated members in majority; one representative from the Government, one from the D.D.P.I ; one representative from the Zilla Parishads and there will be only one representative from the private Management. This is a direct infringement on the fundamental rights of the private Managements to run and administer their own educational institutions. There are so many Suprime Court and High Courts Rulings to the effect that there should not be any interference in the rights of the private Managements regarding appointment of teachers and other staff Members. As per the Constitutional safeguards provided particularly to the minority institutions under Articles 29 and 30 of the Constitution, Minorities are entitled to establish as well as to run and administer their own institutions. If the power of appointment is

taken away, then the power of dismissal will also be taken away. The authorities who appoint the teachers and staff members, will also have the power to remove them which means that there is a direct interference in the fundamental rights of the private Managements. The reply of the Minister is thatthere is no interference and that the rights of the private Managements will not be taken away by this Amendment is not correct This Government Order is violative of the Constitutional safeguards provided to the Minorities. It is a sortof njustice to the private Managements, particularly to the Miniority institutions. I request the Minister that this point should be clarified.

ಶ್ರೀ ಬಿ. ಸೋಮಶೇಖರ್.— ಮಾನ್ಯ ಸಭಾಧ್ಯಕ್ಷರೇ, ನಾವು ಏನು ಈ ತಿದ್ದುಪಡಿಯನ್ನು ತಂದಿದ್ದೇವೆ. ಇದು ತಕ್ಷಣದಲ್ಲಿ ಅಲ್ಪಸಂಖ್ಯಾತರ ಆಡಳಿತ ಮಂಡಲಿಯವರಿಗೆ ಅನ್ವಯಿಸುವುದಿಲ್ಲ. ನಂತರ ಸಂವಿಧಾನಾತ್ಮಕವಾಗಿ ಆಡಳಿತ ಮಂಡಲಿಯವರು ಶಾಲೆಯನ್ನು ತೆರೆಯುವುದಕ್ಕೆ, ಶಿಕ್ಷಣ ಸಂಸ್ಥೆಗಳನ್ನು ರಚನೆ ಮಾಡುವುದಕ್ಕೆ ಹಕ್ಕಿದೆ. ಶೈಕ್ಷಣಿಕ ಗುಣಮಟ್ಟವನ್ನು ಕಾಪಾಡಿಕೊಳ್ಳುವಲ್ಲಿ ಕೆಲವು ಸಂವಿಧಾನಾತ್ಮಕವಾದ ನಿಯಮಗಳನ್ನು ಪಾಲನೆ ಮಾಡುವುದಕ್ಕೆ ಎಲ್ಲಾ ಆಡಳಿತ ಮಂಡಳಿಯವರಿಗೂ ಇದನ್ನು ಮಾಡಬೇಕಾದ ನಿಯಮ ಇದೆ. ಅದರ ಪ್ರಕಾರ ನಾವು ಇದನ್ನು ಮಾಡಿದ್ದೇವೆ ಈ ಕಾನೂನು ಯಾವುದೇ ರೀತಿಯಿಂದ ಆಡಳಿತಮಂಡಳಿಯವರ ಹಕ್ಕಿಗೆ ತೊಂದರೆಯಾಗುವುದಿಲ್ಲ. ಒಳ್ಳೆಯ ರೀತಿಯಿಂದ ನೋಡಿ. ಉತ್ತಮವಾದ ಶಿಕ್ಷಕರನ್ನು ನೇಮಕ ಮಾಡುವ ದೃಷ್ಟಿಯಿಂದ ಶಿಕ್ಷಕರಿಗೆ ಆಗತಕ್ಕಂಥ ತೊಂದರೆಯನ್ನು ಶೋಷಣೆಯನ್ನು ತಪ್ಪಿಸುವ ದೃಷ್ಟಿಯಿಂದ ಮತ್ತು ಮೀಸಲಾತಿಯನ್ನು ಚಾಚೂ ತಪ್ಪದೆ ಪಾಲನೆ ಮಾಡಬೇಕೆಂಬ ನಿಯಮದ ಆಧಾರದ ಮೇಲೆ ಈ ಒಂದು ನೇಮಕಾತಿಯನ್ನು ಮಾಡಿದ್ದೇವೆ. ಮಾನ್ಯ ಸದಸ್ಯರು ಏನು ಸಂಶಯವನ್ನು ವ್ಯಕ್ತಪಡಿಸಿದ್ದಾರೆ, ಇದು ಮೈನಾರಿಟೀಸ್ ಸಂಸ್ಥೆಗಳಿಗೆ ಅನ್ವಯಿಸುವುದಿಲ್ಲ. ಆದ್ದರಿಂದ ಅವರು ಭಯಪಡಬೇಕಾಗಿಲ್ಲ.

SRI MOHAMMED LAIQUDDIN.— Sir, my submission is that when the constitutional safeguards are provided to the minorities under articles 29 and 30 of the Constitution of India; to establish their own anstitutions and to run and administer their own institutions, that includes the power to appoint their own teachers and their own staff members. If the Government says that there is no infringement on the rights of the minorities, it is not correct. This Government order has done serious injustice to the minorities and it is totally violative of the constitutional safeguards provided under the Constitution and also illegal. In this connection, there are so many findings of the Supreme Cout and High Courts. The statement of the Hon'ble Minister is that there is no violation of the constitutional safeguards provided under the Constitution, is not correct I have specifically stated that the safeguards granted under the Constitution to the Minorities have been taken away by this Government Order. The Hon'ble Minister has to explain not only with regard to the private Managements, but also with regard to the private Managements run by Minorities and even by Scheduled Caste Scheduled Tribes, private individuals. societies etc., The issue of this Government order is a dircet infringement of fund amental rights as laid down in

KESHAVANANDA VS. BHARATHI CASE. I request the Hon'ble Minister to kindly clarify on these point.

ಶ್ರೀ ಬಿ. ಸೋಮಶೇಖರ್.—ಯಾವುದೇ ವಿಧವಾದ infringement ಆಡಳಿತ ಮಂಡಲಿಯವರ ಮೇಲೆ ಇಲ್ಲ. ಆಡಳಿತ ಮಂಡಲಿಯವರು ಶಾಲೆಯನ್ನು ತೆರೆಯುವುದಕ್ಕೆ ಹಕ್ಕಿದೆ. ಅವರು ಯಾವರೀತಿಯಲ್ಲಿ ನಡೆಸಬೇಕು, ಯಾವ ಕಾನೂನಿನ ಅಡಿಯಲ್ಲಿ ನಡೆಸಬೇಕೆಂಬ ಬಗ್ಗೆ ನಿರ್ದೇಶನವನ್ನು ಸರ್ಕಾರ ಕೊಡುತ್ತದೆ. ಆ ಮೇಲೆ ಸುಪ್ರೀಂಕೋರ್ಟ್‌ನವರು ಇತ್ತೀಚೆಗೆ ಏನು ತೀರ್ಮಾನ ಕೊಟ್ಟಿದ್ದಾರೆ, ಅದನ್ನು ಗಮನದಲ್ಲಿಟ್ಟುಕೊಂಡೇ ಈ ಆದೇಶವನ್ನು ಮಾಡಿದ್ದೇವೆ. ಇದರಿಂದ ಯಾವುದೇ ರೀತಿಯ infringement ಆಗಿಲ್ಲವೆಂದು ಹೇಳುತ್ತೇನೆ.

(ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್ ಅವರು ಸಭೆಯಲ್ಲಿ ಹಾಜರಿರಲಿಲ್ಲ)

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಸಭಾಧ್ಯಕ್ಷರೇ, ಇದು ಪಿ. ಡಬ್ಲ್ಯು. ಡಿ. ಗೆ ಸಂಬಂಧಿಸಿದ ಪ್ರಶ್ನೆ. ನಾವು ಈಗತಾನೆ ರೇಡಿಯೋದಲ್ಲಿ ಕೇಳಿದೆವು ಈ ಇಲಾಖೆಯ ಮಂತ್ರಿಯವರು ರಾಜೀನಾಮೆ ಕೊಟ್ಟಿದ್ದಾರೆಂದು. ಈಗ ಅವರು ಬಂದು ಉತ್ತರ ಹೇಳುವುದು ಇದೆ. ಅವರು ಏಕೆ ಬರಲಿಲ್ಲ. ಮೈಗೆ ಜಿನ್ನಾಗಿಲ್ಲದೆ ಬರಲಿಲ್ಲವೇ? ಅಥವಾ ಅವರು ರಾಜೀನಾಮೆ ಕೊಟ್ಟಿರುವುದು ನಿಜವೇ? ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳು ಇಲ್ಲಿದ್ದಾರೆ ಅವರು ತಿಳಿಸಬೇಕು. I request the Hon'ble Chief Minister to answer.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ಮಾನ್ಯ ದೇವೇಗೌಡರು ತಮ್ಮ ಸಚಿವಸ್ಥಾನಕ್ಕೆ ರಾಜೀನಾಮೆ ಕೊಟ್ಟಿಲ್ಲ. ನೀರಾವರಿ ಖಾತೆಗೆ ಸಾಕಷ್ಟು ಹಣದ ಅವಕಾಶ ಇಲ್ಲ. ಆದಕ್ಕಾಗಿ ಅದನ್ನು ನಿರ್ವಹಿಸುವುದಕ್ಕೆ ಸಾಧ್ಯವಾಗುವುದಿಲ್ಲ, ನೀರಾವರಿ ಖಾತೆಯಿಂದ ತಮ್ಮನ್ನು ಬಿಡುಗಡೆ ಮಾಡಬೇಕೆಂದು ಹೇಳಿದ್ದಾರೆ ಅಷ್ಟೇ, ಅವರು ಸಚಿವ ಸ್ಥಾನಕ್ಕೆ ರಾಜೀನಾಮೆಯನ್ನು ಕೊಟ್ಟಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ನಾವು ರೇಡಿಯೋದಲ್ಲಿ ಕೇಳಿದ ಪ್ರಕಾರ, ಈಗ ಒಬ್ಬ ಸಚಿವರ ಬಗ್ಗೆ ತಾವು ಹೇಳಿದಿರಿ, ಅದೇ ಪ್ರಕಾರ ಮಂತ್ರಿಮಂಡಲದಲ್ಲಿ ಕ್ರೈಸಿಸ್ ಬಂದಿದ್ದು ೬—೭ ಜನ ಸಚಿವರು ತಮ್ಮ ಸ್ಥಾನಗಳಿಗೆ ರಾಜೀನಾಮೆ ಕಳುಹಿಸಿಕೊಟ್ಟಿದ್ದಾರೆ ಎಂಬ ವಿಚಾರ ನಮಗೆ ಹಾಗೂ ಎಲ್ಲರಿಗೂ ಸ್ಪಷ್ಟವಾಗಿ ಗೊತ್ತಾಗಿರತಕ್ಕ ವಿಚಾರ. ಈ ಸದನದ ನಾಯಕರಾಗಿ ತಾವು ಹೇಳಿಕೆ ಕೊಡಬೇಕಾಗುತ್ತದೆ. ಒಂದೇಸಾರಿ ೬—೭—೮೮ ಜನ ರಾಜೀನಾಮೆ ಕೊಡತಕ್ಕ ವಿಚಾರ ಬಂದರೆ ಅದಕ್ಕೆ ಇರತಕ್ಕಂಥ ಸಕಾರಣಗಳು ಏನು ಎಂಬುದನ್ನು ತಿಳಿದುಕೊಳ್ಳತಕ್ಕ ಹಕ್ಕು ಈ ಸದನಕ್ಕೆ ಇರುತ್ತದೆ. Crisis in the Ministry ಅದು ಬೆಳೆದಿದೆ ಎಂಬ ವಿಚಾರ ಸ್ಪಷ್ಟವಾಗಿ ಗೊತ್ತಾಗುತ್ತದೆ. ಇದಕ್ಕೆ ಕಾರಣ ಏನು ಎಂದು ತಿಳಿದುಕೊಳ್ಳತಕ್ಕ ಹಕ್ಕು ಕರ್ನಾಟಕ ರಾಜ್ಯದ ಜನತೆಗೆ ಇದೆ, ಆದುದರಿಂದ ನೀವು ಈ ಸದನದ ಮುಖಾಂತರ ಜನತೆಗೆ ಹೇಳಬೇಕಾಗುತ್ತದೆ. ದಯವಿಟ್ಟು ತಾವು ತಿಳಿಸಿ ಮಂತ್ರಿಗಳು ಯಾರು ರಾಜೀನಾಮೆ ಕೊಟ್ಟಿದ್ದಾರೆ. ಈ ರೀತಿ ಬಂದಿರತಕ್ಕಂಥ ವರದಿಗಳ ಪ್ರಕಾರ ದೇವೇಗೌಡರು ಒಬ್ಬರ ಪ್ರಶ್ನೆ ಅಲ್ಲ, ಅವರ ಜೊತೆಗೆ ೬—೭ ಜನ ಎಂಬ ಮಾತು ಗೊತ್ತಾಗಿದೆ. ಎಷ್ಟು ಜನ ಯಾವ ಕಾರಣಕ್ಕಾಗಿ ರಾಜೀನಾಮೆ ಕೊಟ್ಟಿದ್ದಾರೆ ಎಂಬ ಹೇಳಿಕೆಯನ್ನು ತಾವು ಕೊಡಬೇಕು. ಆಯಾ ಮಂತ್ರಿಗಳೂ ಕೂಡಾ ಅವರು ರಾಜೀನಾಮೆ ಕೊಟ್ಟಿದ್ದರೆ ಯಾವ ಕಾರಣಕ್ಕಾಗಿ ರಾಜೀನಾಮೆ ಕೊಟ್ಟಿದ್ದೇವೆ ಎಂದು ಇಂಡಿವಿಜುಯಲ್ ಆಗಿ ಸ್ಟೇಟ್‌ಮೆಂಟ್ ಕೊಡತಕ್ಕ ಹಕ್ಕು ರೂಲ್ಸ್ ಪ್ರಕಾರ ಇದೆ. ದಯವಿಟ್ಟು ಮಾನ್ಯ ಸಭಾಧ್ಯಕ್ಷರು ಈ ಹೇಳಿಕೆಯನ್ನು ಕೊಡಿಸಬೇಕೆಂದು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ಮಾನ್ಯ ದೇವೇಗೌಡರು ನೀರಾವರಿ ಖಾತೆಯ ಜವಾಬ್ದಾರಿಯಿಂದ ತಮ್ಮನ್ನು ಮುಕ್ತ ಮಾಡಬೇಕೆಂದು ಹೇಳುವ ಪತ್ರದಿಂದ ಹೊರತಾಗಿ ಬೇರೆ ಯಾವುದೇ ಮಂತ್ರಿಯಿಂದ, ರಾಜೀನಾಮೆಯಾಗಲೀ, ಬೇರೆ ಯಾವುದೇ ಪತ್ರವಾಗಲೀ ನನಗೆ ಬಂದಿಲ್ಲ. ಮಾನ್ಯ ಬಂಗಾರಪ್ಪನವರು ಊಹಾಪೋಹದ ಬಗ್ಗೆ ಬೆಲೆಯನ್ನು ಕೊಡ ಕೂಡದು ಎಂದು ಹೇಳುವುದಕ್ಕೆ ಬಯಸುತ್ತೇನೆ. ಯಾರಾದರೂ ಮಂತ್ರಿ ಮಂಡಲಿಕ್ಕೆ ರಾಜೀನಾಮೆಯನ್ನು ಕೊಟ್ಟರೆ ಆ ವಿಚಾರವನ್ನು ಸಂದರ್ಭಾನುಸಾರವಾಗಿ ತಿಳಿಸುತ್ತೇನೆ, ಅದರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ. ಮತ್ತು ಕರ್ನಾಟಕದ ಜನತೆಗೂ ನಾನು ತಿಳುವಳಿಕೆ ಕೊಡುತ್ತೇನೆ.